

ಅಪಾರ ಮೂಲಿಕೆ ಮತ್ತು ವನ್ಯಸಂಪತ್ತನ್ನು ಮಡಿಲಲ್ಲಿರಿಸಿಕೊಂಡಿರುವ ಶರಾವತಿ ಕಣಿವೆಯ ಪಕ್ಷಿನೋಟ

ನಡೆದುಕೊಂಡು ಹೋಗುವ ದಾರುಣ ಸ್ಥಿತಿಯನ್ನು ನೋಡುತ್ತಿದ್ದೇವೆ. ಅವರು ತಮ್ಮ ಊರಿನಲ್ಲಿಯೇ ಇರುವಂತಾಗಿದ್ದರೆ ಅವರಿಗೆ ಕೊರೊನಾ ಇಷ್ಟರ ಮಟ್ಟಿಗೆ ಬಾಧಿಸುತ್ತಿರಲಿಲ್ಲ. ಹೀಗೆ ನಗರದಿಂದ ಹಳ್ಳಿಗೆ ಬರುವವರಿಂದ ಹಳ್ಳಿಗಳಲ್ಲಿಯೂ ಕೊರೊನಾ ಹರಡುತ್ತಿದೆ. ಇದು ತುಂಬ ಸಂಕೀರ್ಣ ವಿಷಯ. ಒಂದೇ ನಿಟ್ಟಿನಲ್ಲಿ ನೋಡುವುದು ಕಷ್ಟ. ವಿಕೇಂದ್ರಿಕರಣದ ಬಗ್ಗೆ ಮಾತಾಡಿದ ಗಾಂಧಿ ಇಂದು ನಮಗೆ ಅಪ್ರಸ್ತುತರಾಗಿಬಿಟ್ಟಿದ್ದಾರೆ. ಅವರ ಆರ್ಥಿಕ ಪರಿಕಲ್ಪನೆ ಇಂದು ಮ್ಯೂಸಿಯಮ್ ಪೀಸ್ ಆಗಿಬಿಟ್ಟಿದೆ. ಯಾಕೆಂದರೆ ದೊಡ್ಡ ದೊಡ್ಡ ಕಾರ್ಪೊರೇಟ್ ಕುಳಗಳು ಅದರಿಂದ ಬೆಳೆಯುವುದಿಲ್ಲವಲ್ಲ. ನಮ್ಮ ದೇಶದ ಆರ್ಥಿಕ ಅಭಿವೃದ್ಧಿಯ ಮೂಲಭೂತ ಲಕ್ಷಣಗಳು ಬದಲಾಗಲೇಬೇಕಾಗಿದೆ. ಜನರೆಲ್ಲ ಇಂದು ಗೃಹಬಂದಿಗಳಾಗಿದ್ದಾರೆ. ಈಗ ಅವರಿಗೆ ತಮ್ಮ ಮನೆಯ ಹಿತ್ತಲಲ್ಲಿ ಇರುವ ಮಾವಿನ ಮರ, ಪಪ್ಪಾಯಿ ಮರ, ಬಾಳೆಗಿಡ, ಹರಿವೆ ಸೊಪ್ಪು, ತೆಂಗು, ಹಲಸು ಇದೆ ಎಂಬುದೆಲ್ಲ ಕಾಣಿಸುತ್ತಿದೆ. ಇದನ್ನು ನಾವೊಂದು ಪಾಠವಾಗಿ ತೆಗೆದುಕೊಳ್ಳಬೇಕು. ತೆಗೆದುಕೊಳ್ಳದಿದ್ದರೆ ಮತ್ತೊಂದು ಚಾಟಿಯೇಟು ಖಂಡಿತ ಕಾದಿದೆ.

**ಗಿಡಮೂಲಿಕೆ ಅಥವಾ ನಾಟಿವೈದ್ಯದ ಪಾರಂಪರಿಕ ಜ್ಞಾನವನ್ನು ರಕ್ಷಿಸಬೇಕಾದ ಪರಿಸ್ಥಿತಿಗೆ ತಂದಿದ್ದೇವೆ. ಈ ಜ್ಞಾನವನ್ನು ಮತ್ತೆ ಸಮುದಾಯದಲ್ಲಿ ಹರಡುವ ಸಾಧ್ಯತೆ ಇದೆಯೇ?**

ನಮ್ಮ ಪಾರಂಪರಿಕ ಜ್ಞಾನವೆಂಬ ರೈಲಿನ ಕೊನೆಯ ಬೋಗಿ ಮಾತ್ರ ನಮ್ಮೆದುರಿಗೆ ಇದೆ. ಅದೂ ಪ್ಲ್ಯಾಟ್ ಫಾರಂ ಬಿಟ್ಟು ಹೊರಡುತ್ತಿದೆ. ಅದನ್ನೂ ಕಳೆದುಕೊಳ್ಳದಿರಲು ನಾವು ದಾರಿ ಹುಡುಕಿಕೊಳ್ಳಲೇಬೇಕಿದೆ.

ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದಲ್ಲಿ ಇಂಥ ಜ್ಞಾನವನ್ನು ವ್ಯಕ್ತಿ ಅಥವಾ ಸಮುದಾಯಗಳ ಹೆಸರಿನಲ್ಲಿಯೇ ನೋಂದಣಿ ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ. ಕರಿಒಕ್ಕಲಿಗರ ಸಮುದಾಯ, ಹಾಲಕ್ಕಿ ಒಕ್ಕಲಿಗರಂಥ ಅನೇಕ ಸಮುದಾಯಗಳಲ್ಲಿ ಸಾಕಷ್ಟು ಪಾರಂಪರಿಕ ಜ್ಞಾನವಿದೆ. ಅದನ್ನು ಅವರ ಹೆಸರಿನಲ್ಲಿಯೇ ದಾಖಲಿಸಲಾಗುತ್ತದೆ. ಈ ಜ್ಞಾನವನ್ನು ಸಮುದಾಯದಲ್ಲಿಯೇ ಬೆಳೆಸಬೇಕು ಎಂದರೆ ಆ ಸಮುದಾಯದೊಳಗೇ ಅಂಥ ಚೈತನ್ಯ, ಉತ್ಸಾಹ ಇರಬೇಕಾಗುತ್ತದೆ. ಆ ಉತ್ಸಾಹ ಈಗ ಸಮುದಾಯಗಳಲ್ಲಿ ಕಾಣಿಸುತ್ತಿಲ್ಲ. ಅದಕ್ಕೆ ಹಲವು ಕಾರಣಗಳೂ ಇವೆ. ಅದರಿಂದ ಹಣ ಬರುವುದಿಲ್ಲ. ಕಾಡು ಮೇಡು ಅಲೆದು, ಯಾವ್ಯಾವುದೋ ಬೇರು, ಎಲೆ ತೆಗೆದುಕೊಂಡು ಬಂದು, ಒಣಗಿಸಿ, ಕಷಾಯ ಮಾಡಿ ಕಷ್ಟಪಟ್ಟು ಔಷಧ ತಯಾರಿಸಿದರೂ ಅದರಿಂದ ಯಾವುದೇ ಆದಾಯ ಇರುವುದಿಲ್ಲ. ಅದನ್ನು ಜೀವನೋಪಾಯದ ಮಾರ್ಗವನ್ನಾಗಿ ಸ್ವೀಕರಿಸಲು ಸಾಧ್ಯವಿಲ್ಲ ಎಂಬ ಕಾರಣಕ್ಕೆ ಒಂದು ರೀತಿಯಲ್ಲಿ ಅಸಡ್ಡೆ ಬೆಳೆದಿದೆ. ಅಲ್ಲದೆ ಕಾಯ್ದೆಯ ಹೆದರಿಕೆಯೂ ಇರುತ್ತದೆ.

ಜೀವವೈವಿಧ್ಯ ಕಾಯ್ದೆಯ ಪ್ರಕಾರ ನಾಟಿ ವೈದ್ಯರ ಹೆಸರುಗಳನ್ನು ದಾಖಲಿಸಿಕೊಳ್ಳಲಾಗುತ್ತದೆ. ಅಂಥವರು ತಮ್ಮ ಅವಶ್ಯಕತೆಗೆ ಬೇಕಾದಷ್ಟು ಗಿಡಮೂಲಿಕೆಗಳನ್ನು ಸಂಗ್ರಹಿಸಿಕೊಳ್ಳಲು ಅವಕಾಶ ಇದೆ. ಕಮರ್ಷಿಯಲ್ ಆಗಿ ಮಾರಾಟ ಮಾಡಲಿಕ್ಕೆ ಅವಕಾಶ ಇಲ್ಲ. ಗ್ರಾಮ, ತಾಲ್ಲೂಕು, ಜಿಲ್ಲಾಮಟ್ಟದಲ್ಲಿ ರಚಿತವಾಗುವ ‘ಜೀವವೈವಿಧ್ಯ ನಿರ್ವಹಣಾ ಸಮಿತಿ’ಗಳಲ್ಲಿ ಅಂಥ ನಾಟಿವೈದ್ಯರನ್ನೂ ಸದಸ್ಯರನ್ನಾಗಿಸಿಕೊಳ್ಳಿ ಎಂದು ಸರ್ಕಾರದ ಶಿಫಾರಸ್ಸು ಇದೆ. ಹೀಗೆ ಜೀವವೈವಿಧ್ಯ ನಿರ್ವಹಣಾ ಸಮಿತಿ ದಾಖಲಿಸಿದ ಜ್ಞಾನವನ್ನು ಮೌಲ್ಯಮಾಪನ ಮಾಡಲು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ತಾಂತ್ರಿಕ ಸಮಿತಿ ಇರುತ್ತದೆ. ಅಲ್ಲಿಯೂ ಒಬ್ಬರು ನಾಟಿವೈದ್ಯರು ಇರಬೇಕು ಎಂಬ ಶಿಫಾರಸ್ಸು ಇದೆ.

ಇದನ್ನು ನೋಡಿದರೆ ಭಾರತ ಸರ್ಕಾರದ ಜೀವವೈವಿಧ್ಯ ಕಾಯ್ದೆಯ ಪ್ರಕಾರ ನಾಟಿವೈದ್ಯಕ್ಕೆ ಅವಕಾಶ ಇದೆ. ಆದರೆ ‘ಮೆಡಿಕಲ್ ಆ್ಯಕ್ಟ್ 1956’ರ ಪ್ರಕಾರ ಶೈಕ್ಷಣಿಕ ಅರ್ಹತೆ ಇಲ್ಲದವರು ನಾಟಿವೈದ್ಯ ಪ್ರಾಕ್ಟೀಸ್ ಮಾಡುವ ಹಕ್ಕು ಇಲ್ಲ. ಇದು ಎರಡು ಕಾಯ್ದೆಗಳ ನಡುವಿನ ಗೊಂದಲ. ಇಂಥ ಗೊಂದಲ ನಿವಾರಣೆಯಾಗಬೇಕು. ಹಾಗೆಯೇ ಪಾರಂಪರಿಕ ಜ್ಞಾನಸಂಪತ್ತಿನ ಮಹತ್ವದ ಬಗ್ಗೆ ಸಮುದಾಯ ಮಟ್ಟದಲ್ಲಿ ಅರಿವು ಮೂಡಿಸುವ ಕೆಲಸ ನಡೆಯಬೇಕು. ಇದೊಂದೇ ನಮ್ಮೆದುರಿಗಿರುವ ಆಶಾಕಿರಣ. ಈ ದಾರಿಯಲ್ಲಿ ನಾವು ಕೆಲಸ ಮಾಡದಿದ್ದರೆ ನಮ್ಮ ಪಾರಂಪರಿಕ ಜ್ಞಾನಸಂಪತ್ತನ್ನು ಪೂರ್ತಿಯಾಗಿ ಕಳೆದುಕೊಳ್ಳುತ್ತೇವೆ ಅಷ್ಟೆ.